# Current affairs of 2018-07-26 by KPSCVAANI.com

## * ಆರ್ಥಿಕ ಅಪರಾಧಿಗಳ ವಿರುದ್ದದ ವಿಧೇಯಕಕ್ಕೆ ಅಸ್ತು

* 1100 ಕೋಟಿ ರೂ.ಗಿಂತ ಹೆಚ್ಚು ಮೊತ್ತದ ಆರ್ಥಿಕ ಅಪರಾಧಗಳು ಈ ವಿಧೇಯಕದ ಅಡಿಗೆ ಬರಲಿದ. ಸದ್ಯಕ್ಕೆ55 ಘೋಷಿತ ಆರ್ಥಿಕ ಅಪರಾಧಿಗಳು ದೇಶವನ್ನು ತೊರೆದಿದ್ದಾರೆ. * ತೆರಿಗೆ ವಂಚನ, ಸುಸ್ತಿ ಸಾಲ ಹಗರಣ, ಅಕ್ರಮ ಹಣ ವರ್ಗಾವಣೆ, ಬೇನಾಮಿ ಆಸ್ತಿ ಆರೋಪ ಎದುರಿಸುತ್ತಿದ್ದಾರೆ.

## * ಸಂತ್ರಸ್ತ ಮಕ್ಕಳಿಗೂ ಪರಿಹಾರ: ಸುಪ್ರೀಂ

ಪ್ರಾಧಿಕಾರದ ಪರಿಹಾರ ಶಿಫಾರಸು ಸಾಮೂಹಿಕ ಅತ್ಯಾಚಾರ ಸಂತ್ರಸ್ತೆಗೆ 5ಲಕ್ಷದಿಂದ 10 ಲಕ್ಷ. ಅತ್ಯಾಚಾರದಿಂದ ಮೃತ ಸಂತ್ರಸ್ತೆ ಕುಟುಂಬಕ್ಕೆ 5ಲಕ್ಷ 10 ಲಕ್ಷ. ಅತ್ಯಾಚಾರ ಅಥವಾ ಲೈಂಗಿಕ ದೌರ್ಜನ್ಯ ಸಂತ್ರಸ್ತರಿಗೆ 4 ಲಕ್ಷದಿಂದ 7ಲಕ್ಷ. ಆ್ಯಸಿಡ್ ದಾಳಿಯಲ್ಲಿ ಮುಖ ವಿಕಾರಗೊಂಡಿದ್ದರೆ 7 ಲಕ್ಷದಿಂದ 8 ಲಕ್ಷ. ಶೇ 50ಕ್ಕಿಂತ ಹೆಚ್ಚು ಗಾಯವಾಗಿದ್ದರೆ 5 ಲಕ್ಷದಿಂದ 8 ಲಕ್ಷ.

## * ಮೋಡ ಬಿತ್ತನೆಗಾಗಿ ಪ್ರತ್ಯೇಕ ಇಲಾಖೆ ಸ್ಥಾಪನೆ

ಮಳೆ ತರಿಸಬಲ್ಲ ಮೋಡಗಳನ್ನು ಪತ್ತೆ ಮಾಡಬಲ್ಲ ಮೂರು ರೇಡಾರ್‌ಗಳನ್ನು ಬೆಂಗಳೂರು, ಗದಗ ಮತ್ತು ಯಾದಗಿರಿಯಲ್ಲಿ ಕಳೆದ ವರ್ಷ 'ಪ್ರಾಜೆಕ್ಟ್ ವರುಣಾ'ದ ಅಂಗವಾಗಿ ಸ್ಥಾಪಿಸಲಾಗಿದೆ. ಮೋಡ ಬಿತ್ತನೆ : *28 ಜಿಲ್ಲೆ *110 ತಾಲ್ಲೂಕುಗಳು *ಎಷ್ಟು ಬಾರಿ ಬಿತ್ತನೆ 781 *ಮಳೆ ಪ್ರಮಾಣ 25 ಟಿಎಂಸಿ ಅಡಿಯಷ್ಟು

## * ಟಿಪ್ಪು ಸುಲ್ತಾನ್ ಕಾಲದ ರಾಕೆಟ್‌ಗಳು ಪತ್ತೆ



* ಟಿಪ್ಪು ಕಾಲಕ್ಕೆ ಸೇರಿದ್ದು ಎನ್ನಲಾದ ಸಾವಿರಕ್ಕೂ ಹೆಚ್ಚು ಕಬ್ಬಿಣದ ರಾಕೆಟ್‌ಗಳನ್ನು ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನ ನಗರ ಗ್ರಾಮದಲ್ಲಿ ತೋಟದ ಮಾಲೀಕರಾದ ನಾಗರಾಜರಾವ್ ಅದರ ಬಾವಿಯಲ್ಲಿ ಈ ರಾಕೆಟ್‌ಗಳು ಸಿಕ್ಕಿವೆ. * ಇದೇ ಸ್ಥಳದಲ್ಲಿ 2002ರಲ್ಲಿ ಸುಮಾರು 2-3 ರಾಕೆಟ್‌ಗಳು ದೊರೆತಿದ್ದವು. ರಾಜ್ಯ ಪುರಾತತ್ವ ಇಲಾಖೆ ಆಯುಕ್ತರಾದ ಟಿ. ವೆಂಕಟೇಶ್ ಅವರು, ರಾಕೆಟ್‌ಗಳು ದೊರೆತ ಜಾಗದಲ್ಲಿ ಮತ್ತಷ್ಟು ರಾಕೆಟ್‌ಗಳು ಇರಬಹುದು ಎಂಬ ಅನುಮಾನದಿಂದ ಅಧಿಕಾರಿಗಳೊಂದಿಗೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದಾಗ ಎರಡು ರಾಕೆಟ್‌ಗಳು ಸಿಕ್ಕಿವೆ. * ಇನ್ನೂ ಇರಬಹುದು ಎಂಬ ಅನುಮಾನದ ಮೇಲೆ ತೋಟದ ಮಾಲೀಕರ ಅನುಮತಿ ಪಡೆದು ಶೋಧನೆ ನಡೆಸಿದಾಗ ಸಾವಿರ ರಾಕೆಟ್‌ಗಳನ್ನು ಪತ್ತೆ ಆಗಿದೆ. * ಕಬ್ಬಿಣದ ರಾಕೆಟ್‌ಗಳ ತಯಾರಿಕೆಗಿಂತ ಮೊದಲು ಕಾಗದ ಅಥವಾ ಮರದಿಂದ ಮಾಡಿದ, ರಾಕೆಟ್‌ಗಳನ್ನು ಬಳಸುತ್ತಿದ್ದರು. ಆದರೆ ನಂತರ ಟಿಪ್ಪುವಿನ ಕಾಲದಲ್ಲಿ ಅಂದರೆ , ಕ್ರಿ.ಶ 18ನೇ ಶತಮಾನದಲ್ಲಿ ಮೊದಲ ಬಾರಿ ಕಬ್ಬಿಣದ ರಾಕೆಟ್‌ಗಳನ್ನು ಬಳಸಲಾಗಿತ್ತು. ನಂತರ 1799ರಲ್ಲಿ ಟಿಪ್ಪುವಿನ ಮರಣದ ನಂತರ ಬ್ರಿಟಿಷರು 1801ರಲ್ಲಿ ಇಲ್ಲಿನ ರಾಕೆಟ್‌ಗಳ ಮಾದರಿಗಳನ್ನು ತೆಗೆದುಕೊಂಡು ಹೋಗಿ ಇಂಗ್ಲೆಂಡಿನ ವುಲ್ ವಿಚ್ ರಾಯಲ್ ಪ್ರಯೋಗಾಲಯದಲ್ಲಿ ಅಲ್ಲಿನ ನಿಯಂತ್ರಕರಾದ ವಿಲಿಯಂ ಕಾಂಗ್ರೀನ್ ಅವರು ಅಲ್ಲಿನ ರಾಕೆಟ್‌ಗಳನ್ನು ಕಬ್ಬಿಣದ ಮಾದರಿಯಲ್ಲಿ ಮಾಡಿದರು. ಇಂತಹ ರಾಕೆಟ್‌ಗಳು ಪ್ರಪಂಚದಲ್ಲಿಯೇ ಎರಡು ಕಡೆ ಮಾತ್ರ ಇವೆ ಎನ್ನಲಾಗಿದೆ.

* ಅಸ್ಸಾಂ ಚಹಾದ ವಿಶ್ವದಾಖಲೆ



ಅಸ್ಸಾಂನ ಚಹಾ ತೋಟದಲ್ಲಿ ಚಹಾ ಎಲೆಗಳ ಹರಾಜು ಹೊಸ ಜಾಗತಿಕ ದಾಖಲೆಯನ್ನೇ ಸೃಷ್ಟಿಸಿದೆ. ದಿಬ್ರೂಗಢದ ಮನೋಹರಿ ಟೀ ಎಸ್ಟೇಟ್ ನ ಚಹಾ ಎಲೆಗಳು ಪ್ರತಿ ಕೆ.ಜಿಗೆ 39,001 ರೂ.ಗಳ ಭಾರೀ ಬೆಲೆಗೆ ಹರಾಜಾಗಿವೆ. ವಿಶೇಷ ಗುಣಮಟ್ಟದ ಚಹಾ ಎಲೆಗಳ ಹರಾಜು ರಾಷ್ಟ್ರಮಟ್ಟದಲ್ಲಿ ನಡೆಯುತ್ತಿದ್ದು, ಇನ್ನೊಂದು ಭಾರೀ ಬೆಲೆ ಪಡೆದಿರುವುದು ಹೊಸ ಜಾಗತಿಕ ದಾಖಲೆಯಾಗಿದೆ

* ದಿನ ವಿಶೇಷ : ಕಾರ್ಗಿಲ್ ವಿಜಯೋತ್ಸವ




ಸರಿಯಾಗಿ ಇಂದಿಗೆ 19 ವರ್ಷಗಳ ಹಿಂದೆ ಹಿಮಾಲಯದ ದ್ರಾಸ್ ಸೆಕ್ಟರ್ ನ ಕಾರ್ಗಿಲ್ ಶ್ರೇಣಿಯನ್ನು ಗುಪ್ತವಾಗಿ ವಶಪಡಿಸಿಕೊಂಡಿದ್ದ ಪಾಕ್ ಪಡೆಗಳನ್ನು ಭಾರತೀಯ ಸೈನಿಕರು 'ಆಪರೇಷನ್ ವಿಜಯ್' ಹೆಸರಿನಲ್ಲಿ ಕಾರಾಚರಣೆ ನಡೆಸಿ ಯಶಸ್ವಿಯಾಗಿ ಹಿಮ್ಮೆಟ್ಟಿಸಿದ್ದರು. ಅಂದು ದೊರೆತ ವಿಜಯೋತ್ಸವ ವನು ಕಾರ್ಗಿಲ್ ವಿಜಯ್ ದಿವಸ್ ಎಂದು ಪ್ರತಿವರ್ಷ ಜುಲೈ 26ರಂದು ಆಚರಿಸಲಾಗುತ್ತದೆ. ಕಾರ್ಗಿಲ್ ಎಲ್ಲಿದೆ? ಜಮ್ಮು ಮತ್ತು ಕಾಶ್ಮೀರದಲ್ಲಿ ಕಾರ್ಗಿಲ್ ಇದೆ. ಶ್ರೀನಗರದಿಂದ 205 ಕಿ.ಮೀ. ದೂರ. ಗಡಿ ನಿಯಂತ್ರಣ ರೇಖೆಯ ಉತ್ತರ ಭಾಗಕ್ಕೆ ಮುಖ ಮಾಡಿಕೊಂಡಿದೆ. ಹಿಮಾಲಯದ ಉಳಿದ ಪ್ರಾಂತ್ಯಗಳಂತೆ ಕಾರ್ಗಿಲ್ ಕೂಡಾ ಅತಿ ಶೀತ ಪ್ರದೇಶ. ಕಾರ್ಗಿಲ್ ಪರ್ವತ ಶ್ರೇಣಿಯ ವ್ಯಾಪ್ತಿಯಲ್ಲಿ ದ್ರಾಸ್, ಬಟಾಲಿಕ್, ಟೈಗರ್‌ಹಿಲ್ಸ್ ಪರ್ವತಗಳು ಬರುತ್ತವೆ. ಶುರುವಾಗಿದ್ದು ಯಾವಾಗ? 1999ರ ಮೇ ತಿಂಗಳಲ್ಲಿ ಕಾರ್ಗಿಲ್ ಯುದ್ಧ ಆರಂಭವಾಯಿತು. ಪಾಕ್ ಸೈನಿಕರು ಮತ್ತು ಉಗ್ರರು ಕಾರ್ಗಿಲ್ ಜಿಲ್ಲೆಯಲ್ಲಿ ಲೈನ್ ಆಫ್ ಕಂಟ್ರೋಲ್ (ಎಲ್‌ಒಸಿ) ಮೂಲಕ ಒಳ ನುಸುಳಿದ್ದು ಗೊತ್ತಾದ ತಕ್ಷಣ ಭಾರತೀಯ ಸೇನೆ ತನ್ನ ದಾಳಿಯನ್ನು ತೀವ್ರ ಗೊಳಿಸಿತು. ಪಾಕಿಸ್ತಾನದ ಈ ನಡೆ ಭಾರತಕ್ಕೆ ಸಂಪೂರ್ಣವಾಗಿ ಆಶ್ಚರ್ಯವನ್ನುಂಟು ಮಾಡಿತ್ತು. ಆದರೆ, ಸೇನೆಯು ಆತಂಕಕ್ಕೆ ಒಳಗಾಗದೇ "ಆಪರೇಷನ್ ವಿಜಯ್" ಆರಂಭಿಸಿ, ಯಶಸ್ವಿಯಾಗಿ ಮುಗಿಸಿತು. ಮುಷರ್ರಫ್ ಕುತಂತ್ರ : ಜ.ಪರ್ವೇಜ್ ಮುಷರ್ರಫ್ ಪಾಕ್‌ನ ಅತಿ ಪ್ರಬಲ ಸೇನಾ ದಂಡನಾಯಕನಾಗಿದ್ದ ವ್ಯಕ್ತಿ. ಕಾರ್ಗಿಲ್ ಯುದ್ದದ ಹಿಂದಿನ ಮಿದುಳು ಆತ, ಅಂದು ಪ್ರಧಾನಿಯಾಗಿದ್ದ ನವಾಜ್ ಷರೀಫ್‌ಗೆ ಕಾರ್ಗಿಲ್‌ನಲ್ಲಿ ಪಾಕ್ ಸೈನಿಕರು ಹೊಕ್ಕಿದ್ದು ಗೊತ್ತೇ ಇರಲಿಲ್ಲ. ಅಷ್ಟು ಗುಪ್ತವಾಗಿ ಮುಷರ್ರಫ್ ಪ್ಲಾನ್ ಮಾಡಿದ್ದರು. ಇದಕ್ಕೆ ಬೆಂಬಲವಾಗಿದ್ದು ಲೆ.ಜ.ಮೊಹಮ್ಮದ್ ಅಜೀಜ್. ಲಾಹೋರ್ ಒಪ್ಪಂದಕ್ಕೆ ಆಗಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ, ಪ್ರಧಾನಿ ನವಾಜ್ ಷರೀಫ್ 1999ರ ಫೆಬ್ರವರಿಯಲ್ಲಿ ಸಹಿ ಹಾಕುತ್ತಿದ್ದರೆ, ಇತ್ತ ಸದ್ದಿಲ್ಲದೇ ಕಾರ್ಗಿಲ್ ವಶಕ್ಕೆ ಪಾಕ್ ಸೇನೆ ಪ್ಲಾನ್ ಮಾಡಿತ್ತು. ಈ ಮೂಲಕ ಭಾರತದ ಬೆನ್ನಿಗೆ ಚೂರಿ ಇರಿದಿತ್ತು. ಭಾರತಧ ಹೋರಾಟ : ಕಾರ್ಗಿಲ್ ಮರುವಶಪಡಿಸಿಕೊಳ್ಳುವುದು ಅಷ್ಟು

ಸುಲಭದ್ದಾಗಿರಲಿಲ್ಲ. ಕಾರಣ ಅತಿ ದುರ್ಗಮ ಪ್ರದೇಶ, ಮೈನಸ್‌ಗೂ ಕೆಳಗಿಳಿವ, ಪದೇ ಪದೇ ಬದಲಾಗುವ ವಾತಾವರಣ. ಆದರೆ ಭಾರತದ ಸೈನಿಕರು ಎದೆಗುಂದಲಿಲ್ಲ, ಸಮುದ್ರ ಮಟ್ಟದಿಂದ 18 ಸಾವಿರ ಅಡಿ ಎತ್ತರದ ಈ ಪ್ರದೇಶದಲ್ಲಿ ಕೆಚ್ಚೆದೆ ಪ್ರದರ್ಶಿಸಿದರು. ಸೇನೆಯ ಆರ್ಟಿಲರಿ ವಿಭಾಗ ಫಿರಂಗಿ ಬಳಸಿದರೆ, ವಿವಿಧ ರೀತಿಯ ಮದ್ದುಗುಂಡುಗಳು, ಪರಿಕರಗಳನ್ನು ಬಳಸಿಕೊಳ್ಳಲಾಯಿತು. ಇದಕ್ಕೆ ಬೆಂಗಾವಲಾಗಿ ವಾಯುಪಡೆ ನಿಂತಿತ್ತು. ಅವರೊಂದಿಗೆ 44 ಬೆಟಾಲಿಯನ್ ಅರೆಸೇನಾ ಪಡೆಗಳು ಭಾಗಿಯಾಗಿದ್ದವು. ಒಟ್ಟು 60 ವಾಯುಪಡೆ ವಿಮಾನಗಳು ಕಾರ್ಯಾಚರಣೆಯಲ್ಲಿದ್ದವು. ವಾರ್ ಹೀರೋಗಳಿಗೆ ಪುರಸ್ಕಾರ : ಭಾರತದ ಪರವಾಗಿ ಕೆಚ್ಚೆದೆಯ ಹೋರಾಟ ಪ್ರದರ್ಶಿಸಿದ ಸಂಜಯ್ ಕುಮಾರ್, ನಯಿಬ್ ಸುಬೇದಾರ್ ಯೋಗೇಂದ್ರ ಸಿಂಗ್ ಯಾದವ್, ಕ್ಯಾಪ್ಟನ್ ಮನೋಜ್‌ಕುಮಾರ್ ಪಾಂಡೆ ಮತ್ತು ಕ್ಯಾಪ್ಟನ್ ವಿಕ್ರಮ್ ಬಾತ್ರಾ ಅವರಿಗೆ ಭಾರತ ಸರಕಾರ ಪರಮವೀರ ಚಕ್ರ ಪುರಸ್ಕಾರ ನೀಡಿತು.

## * ಕುಸ್ತಿಯಲ್ಲಿ ಮಿಂಚಿದ ಮತ್ತೊಂದು ಭಾರತೀಯ ಪ್ರತಿಭೆ

ಇತ್ತೀಚೆಗೆ ನವದೆಹಲಿಯಲ್ಲಿ ನಡೆದ 2018ರ ಜೂನಿಯರ್ ಏಷ್ಯನ್ ಕುಸ್ತಿ ಚಾಂಪಿಯನ್ ಶಿಪ್‌ನಲ್ಲಿ 74 ಕೆಜಿ ಫ್ರೀ ಸ್ಟೈಲ್ ವಿಭಾಗದಲ್ಲಿ ಚಿನ್ನ ಗೆಲ್ಲುವ ಮೂಲಕ ಕೂಟದಲ್ಲಿ ಭಾರತದ ಪಾಲಿಗೆ ಮೊದಲ ಚಿನ್ನ ಗೆದ್ದ ಸಾಧನೆ ಮಾಡಿದವರು ಸಚಿನ್ ರಾಥಿ, ಜು.22ರಂದು ನಡೆದ ಸ್ಪರ್ಧೆಯಲ್ಲಿ ಮಂಗೋಲಿಯಾದ ಬಾಟ್ ಎರ್ಡೆನೆಯವರೊಂದಿಗಿನ ಪೈಪೋಟಿಯನ್ನು ಸಚಿನ್ ತೀಕ್ಷ್ಣವಾಗಿ ನಿಭಾಯಿಸಿ ಚಿನ್ನಕ್ಕೆ ಕೊರಳೊಡ್ಡಿದ್ದಾರೆ.

## * ಮಂಗಳ ಗ್ರಹದಲ್ಲಿ ದ್ರವ ಸರೋವರ ಪತ್ತೆ

ಇದೇ ಮೊದಲ ಬಾರಿಗೆ ಖಗೋಳ ವಿಜ್ಞಾನಿಗಳು ಮಂಗಳ ಗ್ರಹದ ಮೇಲೆ ದ್ರವ ರೂಪದ ಸರೋವರವೊಂದನ್ನು ಪತ್ತೆಹಚ್ಚಿದ್ದಾರೆ. ಮಂಗಳ ಗ್ರಹದ ದಕ್ಷಿಣ ಧ್ರುವದಲ್ಲಿರುವ ಮಂಜಿನ ಪರ್ವತದ ಕೆಳಗೆ ಸುಮಾರು 1.5 ಕಿ.ಮೀ ಆಳದಲ್ಲಿರುವ ಈ ಸರೋವರ ಸುಮಾರು 20 ಕಿ.ಮೀ. ವಿಸ್ತಾರವಾಗಿದೆ ಎಂದು ವಿಜ್ಞಾನಿಗಳು ಹೇಳಿದ್ದಾರೆ.

## * ಸಂಪನ್ಮೂಲಗಳ ಬಳಕೆಗೆ ಮಿತಿಯಿರಲಿ

ಸಂಪನ್ಮೂಲಗಳ ಬಳಕೆ ಪ್ರಮಾಣ ದಶಕಗಳಿಂದೀಚೆಗೆ ದಾಖಲೆ ಪ್ರಮಾಣದಲ್ಲಿ ಏರಿಕೆಯಾಗುತ್ತಿದ್ದು, ವಿಜ್ಞಾನಿಗಳ ಹೊಸ ಸಂಶೋಧನೆ ಮನುಕುಲವನ್ನು ಮತ್ತಷ್ಟು ಚಿಂತೆಗೀಡುಮಾಡಿದೆ. ವಿಶ್ವಸಂಸ್ಥೆ ನೀಡಿದ ಮಾಹಿತಿಯನ್ನು ವಿಶ್ಲೇಷಿಸಿ ಗ್ಲೋಬಲ್ ಫೂಟ್ ಪ್ರಿಂಟ್ ನೆಟ್ ವರ್ಕ್ ವರದಿ ತಯಾರಿಸಿದ್ದು, ಭೂಮಿ ಒಂದು ವರ್ಷದಲ್ಲಿ ಉತ್ಪಾದಿಸುವ ಸಂಪನ್ಮೂಲಗಳನ್ನು ಮಾನವ ಕೇವಲ 212 ದಿನಗಳಲ್ಲಿ ಬಳಸುತ್ತಿದ್ದಾನೆ. ಭವಿಷ್ಯದಲ್ಲಿ ದುಷ್ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂದು ವಿಜ್ಞಾನಿಗಳು ಎಚ್ಚರಿಸಿದ್ದಾರೆ 2006 ರಿಂದ ಜಗತ್ತಿನಾದ್ಯಂತ ಆಗಸ್ಟ್ 1 ರಂದು ಭೂಮಿ ಉಳಿಸುವಿಕೆ ದಿನಾಚರಣೆ ಆಚರಿಸಲಾಗುತ್ತಿದೆ.

## * ಭಯೋತ್ಪಾದನೆ ನಿಗ್ರಹ: ಆಫ್ರಿಕಾಗೆ ಭಾರತ ಸಹಕಾರ

ಭಯೋತ್ಪಾದನೆ ಮತ್ತು ಉಗ್ರಗಾಮಿ ಚಟುವಟಿಕೆ ನಿಗ್ರಹಿಸಲು ಭಾರತವು ಆಫ್ರಿಕಾಗೆ ಸಂಪೂರ್ಣ ಸಹಕಾರ ನೀಡಲಿದೆ ಎಂದು ಪ್ರಧಾನಿ ಹೇಳಿದ್ದಾರೆ. ಉಗಾಂಡ ಸಂಸತ್ತಿನಲ್ಲಿ ಮಾತನಾಡಿದರು. ಆಫ್ರಿಕಾದ ಹೆಮ್ಮೆಯ ಪಾಲುದಾರ ರಾಷ್ಟ್ರ. ಅದರಲ್ಲಿಯೂ ಉಗಾಂಡ ಈ ನೆಟ್ಟಿನಲ್ಲಿ ಪ್ರಮುಖ ರಾಷ್ಟ್ರವಾಗಿದೆ ಎಂದ ಅವರು, ಉಭಯ ರಾಷ್ಟ್ರಗಳ ನಡುವೆ ಸಹಕಾರ ಸಂಬಂಧ ವೃದ್ಧಿಸಲು ಹತ್ತು ಮಾರ್ಗಸೂಚಿ ತತ್ವಗಳನ್ನು ಪ್ರಸ್ತಾಪಿಸಿದರು. ಭಯೋತ್ಪಾದನೆ ನಿಗ್ರಹದಲ್ಲಿ ಪರಸ್ಪರ ಸಹಕಾರ, ಸೈಬರ್ ಸುರಕ್ಷತೆ, ಶಾಂತಿ ಸ್ಥಾಪನೆ ವಿಷಯ ಬಂದಾಗ ವಿಶ್ವಸಂಸ್ಥೆಯಲ್ಲಿ ಪರಸ್ಪರ ಬೆಂಬಲಕ್ಕೆ ನಿಲ್ಲುವುದು, ಸಾಗರ ಭದ್ರತೆ ಮತ್ತು ಮುಕ್ತ ವ್ಯಾಪಾರ ಸೇರಿದಂತೆ ಹತ್ತು ತತ್ವಗಳಡಿ ಕಾರ್ಯನಿರ್ವ ಹಿಸಲಾಗುವುದು ಎಂದು ಉಗಾಂಡದ ಸಂಸತ್ತಿನಲ್ಲಿ ಮಾತನಾಡಿದ ಭಾರತದ ಮೊದಲ ಪ್ರಧಾನಿ ಎನಿಸಿದ್ದಾರೆ.